# ಶ್ರೀಮಾತೆಯವರ ವಚನಸುಧೆ

ಬಂಗಾಳಿ ಮೂಲ : **'ಮ'** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೩

– ೩ –

ಒಬ್ಬ ಭಕ್ತ ಶ್ರೀಮಾತೆಯವರನ್ನು ನೋಡಲು ಜಯರಾಮಬಾಟಿಗೆ ಹೋಗುತ್ತಿದ್ದ. ಅವನು ಮುಸಲ್ಮಾನ; ಅಮ್‌ಜಾದ್ ಎಂದು ಅವನ ಹೆಸರು. ಶ್ರೀಮಾತೆಯವರಿಗೆ ಕೆಲಸಗಳನ್ನು ಮಾಡಿಕೊಡುತ್ತಿದ್ದ – ಮನೆ ದುರಸ್ತಿ ಮಾಡುವುದು ಇತ್ಯಾದಿ. ಶ್ರೀಮಾತೆಯವರು ಮಣ್ಣಿನ ಮನೆಯಲ್ಲಿ ವಾಸ ಮಾಡುತ್ತಿದ್ದರಲ್ಲವೆ? ಅಮ್‌ಜಾದ್‌ಗೆ ಅಂಥ ದುರಸ್ತಿ ಕೆಲಸಗಳೆಲ್ಲ ಬರುತ್ತಿದ್ದವು. ಅವನು ಶ್ರೀಮಾತೆಯವರ ಮುಂದೆ ಉದ್ದಂಡ ಪ್ರಣಾಮ ಮಾಡುತ್ತಿದ್ದ. ಇತರ ಮುಸಲ್ಮಾನರು ಹಿಂದೂಗಳ ಮನೆಯಲ್ಲಿ ಊಟ ಮಾಡುತ್ತಿರಲಿಲ್ಲ. ಆದರೆ ಅಮ್‌ಜಾದ್ ಶ್ರೀಮಾತೆಯವರ ಮನೆಯಲ್ಲಿ ಠಾಕೂರರ ಪ್ರಸಾದವನ್ನು ಸ್ವೀಕರಿಸುತ್ತಿದ್ದ. ಶ್ರೀಮಾತೆಯವರು ಭಕ್ತರಿಗೆ ಯಾವ ತಟ್ಟೆ, ಗ್ಲಾಸುಗಳಲ್ಲಿ ಆಹಾರ ನೀಡುತ್ತಿದ್ದರೋ, ಅವುಗಳಲ್ಲೇ ಅಮ್‌ಜಾದ್‌ನಿಗೂ ನೀಡುತ್ತಿದ್ದರು. ಅವನ ಊಟವಾದ ನಂತರ ಹೇಳುತ್ತಿದ್ದರು – ''ಎದ್ದೇಳು ಮಗೂ, ಎದ್ದೇಳು.'' ಅವನು ಕೈ ಬಾಯಿ ತೊಳೆಯಲು ಎದ್ದುಬಿಡುತ್ತಿದ್ದ. ಶ್ರೀಮಾತೆಯವರು ಅವನ ಎಂಜಲು ಗ್ಲಾಸು, ತಟ್ಟೆಗಳನ್ನು ಎತ್ತಿ ತಾವೇ ನೆಲವನ್ನು ಒರೆಸಿಬಿಡುತ್ತಿದ್ದರು. ಅನಂತರ ಅದೇ ಬಟ್ಟೆಯಿಂದ ದೇವರಕೋಣೆಗೂ ಹೋಗುತ್ತಿದ್ದರು – ಸ್ನಾನ ಇತ್ಯಾದಿಗಳನ್ನು ಮಾಡುತ್ತಿರಲಿಲ್ಲ. ಶ್ರೀಮಾತೆಯವರದು ಇದೇನು ಆಚರಣೆ! ಈ ದೃಷ್ಟಿಕೋನ ಬೇರೆ ಯಾರಿಗಿದೆ? ಅಮ್‌ಜಾದ್ ತನ್ನ ಹಿಂದಿನ ದಿನಗಳಲ್ಲಿ ಡಕಾಯಿತನಾಗಿದ್ದ. ಆದಕಾರಣ ಎಲ್ಲರೂ ಅವನನ್ನು ನಿಕೃಷ್ಟವಾಗಿ ಕಾಣುತ್ತಿದ್ದರು. ಆದರೆ ಶ್ರೀಮಾತೆಯವರು ಅವನ ಅಂತರ್ಯದಲ್ಲಿ 'ವಸ್ತು' ಇದ್ದುದನ್ನು ಕಂಡಿದ್ದರು. ಅವರು ಹೇಳುತ್ತಿದ್ದರು: ''ನನ್ನ ಎಷ್ಟೊಂದು ಮಂದಿ ಮಕ್ಕಳು ಎಷ್ಟೊಂದು ಸ್ಥಾನಗಳಲ್ಲಿ ಇದ್ದಾರೆ! – ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು. ನಾನು ಎಲ್ಲರನ್ನೂ ನೋಡಿಕೊಳ್ಳಬೇಕು. ಅವರಿಗೆಲ್ಲ ತಿನ್ನಿಸಬೇಕು, ಉಪಚರಿಸಬೇಕು – ಮಕ್ಕಳಲ್ಲವೆ?'' ಆಹ! ಎಂಥ ಉದಾರ ದೃಷ್ಟಿ ಅವರದು! ಅವರಾದರೋ, ಹಳ್ಳಿಯ ಮಂದಿ. ಸಾಲದ್ದಕ್ಕೆ ಸಾಂಪ್ರದಾಯಿಕ ಬ್ರಾಹ್ಮಣರ ಹೆಣ್ಣುಮಗಳು. ಓದುಬರಹ ಕಲಿತಿರಲಿಲ್ಲ. ಆದರೆ ಅವರದು ಎಂಥ ವಿಶಾಲ ಹೃದಯ, ಇಡೀ ಜಗತ್ತನ್ನೇ ಒಂದಾಗಿ ಕಾಣುವ ದೃಷ್ಟಿ! ಭಗವಂತನಿಗಲ್ಲದೆ ಸಾಧಾರಣ ಮಾನವನಿಗೆ ಇದೆಲ್ಲ ಲಭಿಸದು. ಜಗನ್ಮಾತೆ ಅವರು, ಆದ್ದರಿಂದಲೇ ಅವರು ಎಲ್ಲರ ತಾಯಿ.



ಅಮ್‌ಜಾದ್ ಇಂದು ದೇಹತ್ಯಾಗ ಮಾಡಿದ.[೧] ಒಂದಿಷ್ಟು ಬಾಕಿ ಉಳಿದಿತ್ತು. ಶ್ರೀಮಾತೆಯವರದ ದರ್ಶನ ಮಾಡಿ ಅವನು ಮುಕ್ತನಾದ. *(ಶ್ರೀ 'ಮ' ದರ್ಶನ್, ಸ್ವಾಮಿ ನಿತ್ಯಾತ್ಮಾನಂದ, ೩ನೇ ಭಾಗ, ಪು.೨೮೬–೮೭)*

ಠಾಕೂರರ ಬಗ್ಗೆ ಜನರು ಏನೇನೋ ಆಡಿಕೊಳ್ಳುತ್ತಿದ್ದರು. ಒಂದು ಸಲ ಒಬ್ಬ ಭಕ್ತ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಒಂದಿಷ್ಟು ಹಣ ನೀಡಿದ. ದೇವಾಲಯದ ಅಧಿಕಾರಿಗಳಾದ (ಕಾಳೀಮಂದಿರದ ವ್ಯವಸ್ಥಾಪಕರು) ತ್ರೈಲೋಕ್ಯ ಮುಂತಾದವರು ಹೇಳಿದರು: ''ಚಿಕ್ಕ ಚಟರ್ಜಿಯವರು ಹಣ ಸಂಪಾದನೆ ಮಾಡಲು ಪತ್ನಿಯನ್ನು ಕರೆದುಕೊಂಡುಬಂದಿದ್ದಾರೆ.'' ಇದನ್ನು ಕೇಳಿದ ಠಾಕೂರರು ಕಾಳೀಮಾತೆಯ ಮುಂದೆ ನಿಂತು ಅಳುತ್ತ ಹೇಳತೊಡಗಿದರು, ''ಅಮ್ಮಾ, ಅವರು ಈ ರೀತಿ ಆಡಿಕೊಳ್ಳುತ್ತಿದ್ದಾರೆ.'' *(ಅಲ್ಲೇ, ೬ನೇ ಭಾಗ, ಪು.೭೪)*

---

೧ ಶ್ರೀ 'ಮ' ಅವರ ಈ ಚಿಂತನೆ, ದಿನಾಂಕ ೨೫.೧೨.೧೯೨೩ರಂದು ನಡೆದದ್ದು. *(–ಸಂ)*

ಶ್ರೀಮಾತೆಯವರು ಒಬ್ಬ ಸಾಧುವಿಗೆ ಹೇಳಿದ್ದರು: ''ಠಾಕೂರರು ನಿಮ್ಮ ಕೊನೆಯ ದಿನಗಳಲ್ಲಿ ಬಂದು ಕರೆದುಕೊಂಡು ಹೋಗುತ್ತಾರೆ – ಮನೆಯ ಮಗು ಮನೆಗೇ ಹೋಗುತ್ತಾನೆ. ಆದರೆ ಬದುಕಿರುವಾಗಲೇ ಶಾಂತಿ ಬೇಕಿದ್ದರೆ, ಯಾವಾಗಲೂ ತಪಸ್ಸು ಮಾಡು. ಠಾಕೂರರನ್ನೇ ನೆನೆದುಕೋ.'' ಏಕೆಂದರೆ, ತಪಸ್ಸು ಮಾಡಿದರೆ ಅವರ ಕೃಪೆ ಲಭಿಸುವುದು. ಅವರ ಕೃಪೆ ಯಾವುದೇ ಷರತ್ತಿಗೆ ಅಧೀನವಲ್ಲ. *(ಅಲ್ಲೇ, ೭ನೇ ಭಾಗ, ಪು.೧೩೬)*

(೧೯೨೫ರ ಜನವರಿ ೧೮ರಂದು ದಕ್ಷಿಣೇಶ್ವರದ ಶ್ರೀರಾಮಕೃಷ್ಣರ ಕೋಣೆಯ ದರ್ಶನ ಮಾಡಿದಾಗ) :

ದೊಡ್ಡ ಮಂಚದ ಮೇಲೆ ಶ್ರೀರಾಮಕೃಷ್ಣರು ಎಂಟು ತಿಂಗಳ ಸುದೀರ್ಘಕಾಲ ಶ್ರೀಮಾತೆಯವರೊಂದಿಗೆ ಮಲಗಿದ್ದು, ಅತ್ಯಂತ ಕಠಿಣವಾದ ಸಾಧನೆ ಮಾಡಿ ಉತ್ತೀರ್ಣರಾದರು. 'ರಮಣಿಯೊಂದಿಗೆ ವಾಸವಾಗಿದ್ದೂ ರಮಿಸದ ರಮಣ'– ಅವತಾರ ಪುರುಷರ ದೈವೀ ಚಾರಿತ್ರ್ಯಕ್ಕೆ ಇದೊಂದು ನಿದರ್ಶನ; ಇದೊಂದು ಪರೀಕ್ಷೆ. ಲೋಕಶಿಕ್ಷಣಕ್ಕೋಸ್ಕರ ಠಾಕೂರರು ಈ ಪರೀಕ್ಷೆಯಲ್ಲಿ ಅನಾಯಾಸವಾಗಿ ತೇರ್ಗಡೆ ಹೊಂದಿದರು. ಆದ್ದರಿಂದಲೇ ಅವರು 'ನಾನು ನಿಮಗೆ ಏನಾಗಬೇಕು?' ಎಂಬ ಶ್ರೀಮಾತೆಯವರ ಪ್ರಶ್ನೆಗೆ ಅತ್ಯಂತ ಆತ್ಮವಿಶ್ವಾಸದಿಂದ ಉತ್ತರ ನೀಡಲು ಸಮರ್ಥರಾದರು: ''ಯಾವ ತಾಯಿ ದೇವಾಲಯದಲ್ಲಿ ಇರುವಳೋ, ಯಾವ ತಾಯಿಯ ಗರ್ಭದಿಂದ ಈ ದೇಹ ಜನ್ಮ ಪಡೆಯಿತೋ, ಅದೇ ತಾಯಿ ಈಗ ನನ್ನ ಕಾಲೊತ್ತುತ್ತಿದ್ದಾಳೆ'' ಎಂದು... ಶ್ರೀರಾಮಕೃಷ್ಣರ ವಿವಾಹವೆಂಬ ಲೀಲೆ, ಪತ್ನಿಯೊಂದಿಗೆ ಶಯನವೆಂಬ ಲೀಲೆ – ಇವೆಲ್ಲವೂ ಜನರ ಉದ್ಧಾರಕ್ಕಾಗಿ. ಸಮಾಜದ ದೃಷ್ಟಿ ದೇಹದ ಕಡೆಯಿಂದ ಈಶ್ವರನ ಕಡೆಗೆ ಹೋಗಿ ಒಂದಾಗುವುದಕ್ಕಾಗಿ. *(ಅಲ್ಲೇ, ೧೨ನೇ ಭಾಗ, ಪು.೧೭೭–೭೮)*

(ಸ್ವಾಮಿ ಅರೂಪಾನಂದರ 'ಮಾಯೇರ್ ಕಥಾ' *(ಕನ್ನಡದಲ್ಲಿ– 'ಶ್ರೀಶಾರದಾದೇವಿ ವಚನವೇದ')* ಪುಸ್ತಕದ ಹಸ್ತಪ್ರತಿ (ಪಾಂಡುಲಿಪಿಯಲ್ಲಿ)ಯನ್ನು 'ಮ' ಅವರಿಗೆ ಓದಿ ಹೇಳಿದಾಗ, ಅವರ ಆದೇಶದಂತೆ ಅಲ್ಲಿದ್ದ ಭಕ್ತವೃಂದವು ಆ ಗ್ರಂಥದ ಪಠಣ ಮಾಡಿತು. 'ಮ' ಅವರೇ ಶ್ರೀಮಾತೆಯವರ ಕೆಲವು ಉಪದೇಶಗಳನ್ನು ಪುನರಾವೃತ್ತಿ ಮಾಡಿದರು. ಈ ರೀತಿ ಪುನರಾವೃತ್ತಿ ಮಾಡುವ ಪದ್ಧತಿಯನ್ನು ಶಾಲೆ–ಕಾಲೇಜುಗಳಲ್ಲಿ ಪಾಠ ಮಾಡುವಾಗ ಅವರೇ ಆರಂಭಿಸಿದರು. 'ಮ' ಅವರ ಶಿಕ್ಷಣ ಕ್ರಮವು ಮಾದರಿಯಾಗಲು ಇಂತಹ ಪುನರಾವೃತ್ತಿಯೂ ಒಂದು ಪ್ರಧಾನ ಕಾರಣವಾಗಿತ್ತು. ಇದನ್ನು ಅವರು ತಮ್ಮ ಗುರುಗಳಾದ ಶ್ರೀರಾಮಕೃಷ್ಣ ಪರಮಹಂಸರಿಂದಲೇ ಕಲಿತಿದ್ದರು. ಪ್ರಾಯಶಃ ಪರಮಹಂಸರು 'ಮಾಸ್ಟರ್' ಮೂಲಕ ತಮ್ಮ ಉಪದೇಶಗಳನ್ನೇ ಪುನರಾವೃತ್ತಿ ಮಾಡಿಸುತ್ತಿದ್ದರು.)

ಶ್ರೀಮಾತೆಯವರು ಹೇಳಿದ್ದರು – promise (ಪ್ರತಿಜ್ಞೆ) ಮಾಡಿದ್ದರು, ೧) ಯಾರು ಶ್ರೀರಾಮಕೃಷ್ಣರಲ್ಲಿ ಶರಣಾಗತರಾಗಿದ್ದಾರೋ, ಕಡೆಯ ಪಕ್ಷ ಅವರ ಮರಣದ ಸಮಯದಲ್ಲಾದರೂ ಠಾಕೂರರು ಅವರಿಗೆ ದರ್ಶನ ನೀಡಲೇಬೇಕು. ೨) ದೇಹ ಧಾರಣೆ ಮಾಡಿದ ಮೇಲೆ ದುಃಖ, ಕಷ್ಟಗಳು ಇದ್ದೇ ಇರುತ್ತವೆ. ಅದನ್ನು ತಡೆಯುವ ಶಕ್ತಿ ಬ್ರಹ್ಮನಿಗೂ ಇಲ್ಲ. ಆದ್ದರಿಂದ ಶಾಂತಿ ಬೇಕಿದ್ದರೆ ಸಾಧನೆ–ಭಜನೆ ಮಾಡು. ೩) ಮೃತ್ಯು ಯಾವಾಗ ಬರುವುದೋ ಖಚಿತವಾಗಿ ಹೇಳಲಾಗದು. ಆದ್ದರಿಂದ ಕಾಲ–ಅಕಾಲ ಇತ್ಯಾದಿಗಳನ್ನು ಪರಿಗಣಿಸಬೇಡ. ಅದಕ್ಕೆ ಬದಲಾಗಿ, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೆ ತೀರ್ಥಯಾತ್ರೆ ಮಾಡುವುದು ಒಳ್ಳೆಯದು. ೪) ಕರ್ಮ ಕಳೆಯುವುದಿಲ್ಲ ಏಕೆ? ಎಂಬ ಪ್ರಶ್ನೆಗೆ ಶ್ರೀಮಾತೆ ಹೀಗೆ ಉತ್ತರಿಸಿದರು: ''ನೂಲಿನ ರೀಲಿನಲ್ಲಿ ಎಷ್ಟೋ ದಾರ ಸುತ್ತಿಕೊಂಡಿದೆ. ಅವೆಲ್ಲ ಹೊರಬಂದರೆ ಮಾತ್ರವೇ ಖಾಲಿಯಾಗುತ್ತವೆ.'' ೫) ಠಾಕೂರರು ಒಂದು ದಿನವಾದರೂ ಅವರಿಗೆ (ಶ್ರೀಮಾತೆಯವರಿಗೆ) ಕಷ್ಟ ಕೊಡಲಿಲ್ಲ.

('ಮ' ಅವರು ಒಮ್ಮೆ ಭಕ್ತರಿಗೆ ಶ್ರೀಮಾತೆಯವರ ಈ 'ಪಂಚರತ್ನ' ಉಪದೇಶಗಳನ್ನು ಕೊಡುಗೆಯಾಗಿ ನೀಡಿ ಹೀಗೆ ಆಹ್ವಾನಿಸಿದರು – ನಿಮ್ಮಲ್ಲಿ ಯಾರಿಗೆ 'ಶ್ರೀಮಾತೆಯವರ ಮಾತು'ಗಳಲ್ಲಿ ಏನೇನು ನೆನಪಿನಲ್ಲಿ ಉಳಿದಿವೆಯೋ ಹೇಳಿ ನೋಡೋಣ'' ಎಂದು. ಒಬ್ಬರಾದ ನಂತರ ಇನ್ನೊಬ್ಬರು ಅವುಗಳನ್ನು ಹೇಳತೊಡಗಿದರು.) ಅವರೆಲ್ಲ ಪರಸ್ಪರ ಶ್ರೀಮಾತೆಯವರ ಮಾತುಗಳನ್ನು ಹೇಳಿಕೊಳ್ಳುತ್ತ ಎಷ್ಟೊಂದು ಉಪಕಾರ ಹೊಂದಿದರು! *(ಅಲ್ಲೇ, ೩ನೇ ಭಾಗ, ಪು.೧೩೬–೩೯)*

(ಇನ್ನೊಂದು ದಿನ 'ಮ' ಅವರ ಆದೇಶದಂತೆ, 'ಶ್ರೀಮಾತೆಯವರ ಮಾತು'ಗಳ ಸ್ಮರಣೆ ಮಾಡಿಕೊಳ್ಳುತ್ತಿದ್ದಾಗ, ಹಲವು ಮಾತುಗಳ ನಡುವೆ ಹೀಗೆಂದರು: ''ಯಾರು ಮಂತ್ರದೀಕ್ಷೆ ಪಡೆದಿದ್ದರೋ, ಯಾರು ಠಾಕೂರರಲ್ಲಿ ಶರಣಾಗತರಾಗಿದ್ದಾರೋ, ಅವರನ್ನು ಬ್ರಹ್ಮನ ಶಾಪ ಕೂಡ ಏನೂ ಮಾಡಲಾಗದು. ಅವರಲ್ಲಿ ಶರಣಾಗತರಾದವರಿಗೆ ಠಾಕೂರರು ಕೊನೆಗಾಲದಲ್ಲಾದರೂ ದರ್ಶನ ನೀಡಲೇಬೇಕಾಗುವುದು.'')

ಆಹ – ಅದೆಂಥ promise (ಶಪಥ) ! ಠಾಕೂರರೂ ಹೇಳಿದ್ದರು: ''ಶಪಥ ಮಾಡುತ್ತೇನೆ – 'ಯಾರು ನನ್ನನ್ನು ನೆನೆಯುವರೋ ಅವರು ನನ್ನ ಐಶ್ವರ್ಯವನ್ನು ಹೊಂದುವರು, ಹೇಗೆ ತಂದೆಯ ಐಶ್ವರ್ಯವನ್ನೆಲ್ಲ ಮಗ ಪಡೆಯುವನೋ ಹಾಗೆ'' –ಅಂತ. ಅಷ್ಟೊಂದು ಖಚಿತವಾಗಿ ಅವರು ಹೇಳಿದ್ದಾರೆ, ಆದರೂ ಜನರಿಗೆ ವಿಶ್ವಾಸವುಂಟಾಗುವುದೆ? ಶ್ರೀಮಾತೆಯವರಿಗೆ ಭಕ್ತರ ಮೇಲೆ ಎಷ್ಟೊಂದು ಪ್ರೀತಿ! ಒಬ್ಬ ಭಕ್ತ ದೀಕ್ಷೆ ಪಡೆದ ಮೇಲೆ ಜಯರಾಮಬಾಟಿಯಿಂದ ಹೊರಟುಹೋದ. ಶ್ರೀಮಾತೆ ಜೋರಾಗಿ ಅಳುತ್ತ ಅವನನ್ನು ಬೀಳ್ಕೊಡಲು ತಮ್ಮ ಕೋಣೆಯಿಂದ ಹೊರಬಂದರು. ಎಲ್ಲಿಯತನಕ ಅವನು ಹೋಗು

ತ್ತಿದ್ದುದು ದೃಷ್ಟಿಗೆ ಗೋಚರವಾಗಿತ್ತೋ ಅಲ್ಲಿಯವರೆಗೂ ಅವರು ನೋಡುತ್ತ ನಿಂತಿದ್ದರು. ಕೇವಲ ಒಂದೆರಡು ದಿನಗಳ ಪರಿಚಯ ವಷ್ಟೆ; ಆದರೆ ಅವರು ಹೆತ್ತ ತಾಯಿಗಿಂತಲೂ ಮಿಗಿಲಾಗಿದ್ದರು. ಅವರ ಪ್ರೀತಿ ಎಷ್ಟೊಂದು ತೀವ್ರವಾಗಿತ್ತು ಎಂಬುದನ್ನು ಸಾಮಾನ್ಯ ವ್ಯಕ್ತಿಗಳು ತಿಳಿಯುವರೆ? ಒಂದು ಸಲ ಅವರು ಹೇಳುತ್ತಾರೆ, ಜಪ ತಪ ಇತ್ಯಾದಿ ಏನೂ ಮಾಡಬೇಕಾಗಿಲ್ಲ ಎಂದು. ಮತ್ತೊಮ್ಮೆ ಹೇಳುತ್ತಾರೆ, ಜೀವನದಲ್ಲಿ ಶಾಂತಿ ಬೇಕಾಗಿದ್ದರೆ ಸಾಧನೆ ಮಾಡ ಬೇಕು ಎಂದು. ಎಷ್ಟು ಸುಂದರವಾಗಿ two extremes meet (ಎರಡು ವಿರುದ್ಧ ಭಾವಗಳ ಸಮನ್ವಯ) ಮಾಡಿ ಬಿಟ್ಟರು! *(ಅಲ್ಲೇ, ಪು.೧೪೮-೪೯)*

-೪-

ಶ್ರೀಮಾತೆಯವರ ಜೀವನ ಹೇಗಿತ್ತು? ಕಾಮಾರಪುಕುರದಲ್ಲಿ ದ್ದಾಗ ಠಾಕೂರರು ಅವರಿಗೆ ಯಾವುದನ್ನೆಲ್ಲ ಕಲಿಸಿಕೊಟ್ಟರು? ಕಾಮಾರಪುಕುರದಲ್ಲಿದ್ದುಕೊಂಡು ಠಾಕೂರರು ಗೃಹಸ್ಥ ಜೀವನ ವನ್ನು ಅಭಿನಯಿಸಿದಂತಿತ್ತು. 'ಗದಾಯ್ ಈಗ ಸಂಸಾರಿಯಾಗಿ ಬಿಟ್ಟ' ಎಂದು ಜನರು ಭಾವಿಸಿಕೊಂಡರು. ಆದರೆ ಅವರು ಶ್ರೀಮಾತೆಯವರೊಂದಿಗೆ ಯಾವಾಗಲೂ ಭಗವಂತನ ವಿಷಯ ವಾಗಿಯೇ ಮಾತನಾಡುತ್ತಿದ್ದರು. ಶ್ರೀಮಾತೆ ಹೇಗೆ ದೈವೀಭಾವ ದಿಂದ ಜೀವನ ನಡೆಸಬೇಕು – ಈ ಕುರಿತೇ ಯಾವಾಗಲೂ ಉಪ ದೇಶ, ಶಿಕ್ಷಣ ನೀಡುತ್ತಿದ್ದರು. ಭಗವಂತನ ದರ್ಶನವೇ ಮಾನವ ಜೀವನದ ಸರ್ವಶ್ರೇಷ್ಠ ಗುರಿ. ಯಾವ ರೀತಿಯ ಜೀವನವನ್ನು ನಡೆಸಿದರೆ ಈ ಗುರಿಯನ್ನು ಸಾಧಿಸಬಹುದು, ಭಕ್ತನಾದವನು ಹೇಗೆ ಸಂಸಾರದಲ್ಲಿ ಎಲ್ಲರೊಡನೆ ವಾಸವಾಗಿದ್ದುಕೊಂಡೂ, ಮನಸ್ಸಿನಲ್ಲಿ ಸದಾ ಭಗವಂತನನ್ನು ಕುರಿತು ಜ್ಞಾನ, ಭಕ್ತಿ ಇವನ್ನು ಜಾಗೃತವಾಗಿ ಇಡಬಹುದು ಇಂತಹ ಚರ್ಚೆಗಳನ್ನೇ ಹಗಲು ರಾತ್ರಿ ಮಾಡುತ್ತಿದ್ದರು. ಇದರೊಂದಿಗೆ ಲೌಕಿಕ ವಿಷಯಗಳನ್ನೂ ಅವರು ಕಲಿಸುತ್ತಿದ್ದರು. ಭಕ್ತನಾದವನು ಎಲ್ಲ ವಿಷಯಗಳಲ್ಲೂ ನಿಪುಣನಾಗಿರಬೇಕೆಂದು ಅವರು ಹೇಳುತ್ತಿದ್ದರು. ಯಾವಾಗ ಹೇಗಿರಬೇಕೋ, ಆಗ ಹಾಗಿರಬೇಕು; ಎಲ್ಲಿ ಹೇಗಿರಬೇಕೋ ಅಲ್ಲಿ ಹಾಗಿರಬೇಕು; ಯಾರೊಂದಿಗೆ ಹೇಗಿರಬೇಕೋ, ಅವರೊಂದಿಗೆ ಹಾಗಿರಬೇಕು – ಸ್ಥಳ, ಕಾಲ, ಪಾತ್ರ ಇತ್ಯಾದಿಗಳನ್ನು ನೋಡಿ ಕೊಂಡು ಬದುಕಲು ಶಿಕ್ಷಣ ನೀಡುತ್ತಿದ್ದರು.

ಬ್ರಹ್ಮಚರ್ಯ ಹಾಗೂ ಭಗವಂತನಲ್ಲಿ ತನ್ಮಯನಾಗುವುದು — ಈ ಎರಡು ಶಿಕ್ಷಣಗಳನ್ನು ನಾವು ಶ್ರೀಮಾತೆಯವರ ಜೀವನ ದಿಂದ ಪಡೆಯಬಹುದು. ಸಂಯಮ ಮತ್ತು ಸೇವೆ. ಭಗವಂತ ನನ್ನು ಬಿಟ್ಟು ಬೇರೇನೂ ಅವರು ತಿಳಿದಿರಲಿಲ್ಲ. ಸರ್ವಜೀವಿ ಗಳಲ್ಲೂ ಭಗವಂತನ ದರ್ಶನವನ್ನು ಮಾಡಿ, 'ಅವನ' ಸೇವೆ ಯನ್ನು ಹಗಲು, ರಾತ್ರಿ ಮಾಡುತ್ತಿದ್ದರು. ಶ್ರೀಮಾತೆಯವರು ಏನೇನು ಹೇಳಿ ಹೋಗಿದ್ದಾರೋ ಅವೆಲ್ಲವೂ ಮಂತ್ರವೇ. ಇಂಗ್ಲಿಷ್ ಕಲಿತಿದ್ದ ದೊಡ್ಡದೊಡ್ಡ ವಿದ್ವಾಂಸ ಹೆಣ್ಣಮಕ್ಕಳೆಲ್ಲ – ನಿವೇದಿತಾ ಮುಂತಾದವರು ಅವರ ಪಾದಗಳ ಬಳಿ ಕೈಜೋಡಿಸಿ ಕುಳಿತು ಕೊಳ್ಳುತ್ತಿದ್ದರು. ಇದರ ಅರ್ಥ– ಆಧುನಿಕ ಭಾವ, ಆಧುನಿಕ ವಿದ್ಯೆ ಎಲ್ಲವೂ ಅವರ ಮುಂದೆ ತಲೆತಗ್ಗಿಸಿಕೊಂಡಿತ್ತು ಎಂದು.

ಆಗ ಶ್ರೀಮಾತೆಯವರು ವೃಂದಾವನದಲ್ಲಿದ್ದರು. ಆಗ ರಾಮಕೃಷ್ಣ ಮಠವಿದ್ದುದು ಬಾರಾನಗರದಲ್ಲಿ. ಒಂದು ದಿನ ಅಲ್ಲಿ ಸ್ವಾಮೀಜಿಯವರೊಂದಿಗೆ ಮಾತುಕತೆ ನಡೆಯುತ್ತಿತ್ತು. ಸ್ವಾಮೀಜಿ ಆಗ ಶ್ರೀಮಾತೆಯವರ ಬಗ್ಗೆ ಹೇಳಿದರು. ಕಾಶೀ ಪುರದ ಉದ್ಯಾನ ಮನೆಯಲ್ಲಿ ಒಂದು ದಿನ ಭಕ್ತರೆಲ್ಲ ಶ್ರೀರಾಮ ಕೃಷ್ಣರ ಬಳಿ, ಶ್ರೀಮಾತೆಯವರಿಗೆ ಅವರ ಮೇಲೆ ಇದ್ದ ಪ್ರೀತಿಯ ಬಗ್ಗೆ ಉಲ್ಲೇಖಿಸಿದರು. ಆಗ ಶ್ರೀರಾಮಕೃಷ್ಣರ ಸೇವೆ ಮಾಡಲು ಶ್ರೀಮಾತೆಯವರು ಕಾಶೀಪುರದಲ್ಲಿದ್ದರು. ಶ್ರೀಮಾತೆಯವ ರಂಥ ವಿಶಾಲ ಹೃದಯವನ್ನು ತಾವೆಲ್ಲೂ ಕಂಡಿಲ್ಲ ಎಂದು ಭಕ್ತರು ಠಾಕೂರರಿಗೆ ಹೇಳಿದ್ದರು. ಆಗ ನಾನು ಸ್ವಾಮೀಜಿಗೆ ಹೇಳಿದೆ – ''ಅದಕ್ಕೆ ಠಾಕೂರರು ಏನೆಂದರು?'' ಸ್ವಾಮೀಜಿ ಹೇಳಿದರು: ''ಅವರು ನಗತೊಡಗಿದರು. ಬಳಿಕ ಹೇಳಿದರು – 'ನನ್ನ ಶಕ್ತಿಯಲ್ಲವೆ ಅವಳು? ಆದ್ದರಿಂದಲೇ ಹೀಗಿದ್ದಾಳೆ' ಎಂದು. *('ಉದ್ಬೋಧನ, ಸಂ.೧೦೨, ಸಂ.೧೦, ಪು ೬೯೨)*[೨]

---

೨ ಸ್ವಾಮಿ ನಿತ್ಯಾತ್ಮಾನಂದರ 'ಶ್ರೀ ಮ-ದರ್ಶನ್' ಗ್ರಂಥದಿಂದ ಶ್ರೀಮಾತೆ ಯವರನ್ನು ಕುರಿತ 'ಮ' ಅವರ ಮಾತುಗಳನ್ನು ಪ್ರಕಾಶಕರ ಅನುಮತಿ ಯೊಂದಿಗೆ ಇಲ್ಲಿ ಸಂಗ್ರಹಿಸಲಾಗಿದೆ. ಇದಕ್ಕಾಗಿ ಪ್ರಕಾಶಕರಿಗೆ ನಮ್ಮ ಕೃತಜ್ಞತೆ ಗಳನ್ನು ಸಲ್ಲಿಸುತ್ತೇವೆ. ಸಂಕಲನ ಮಾಡಿದವರು: ಜಲಧಿಕುಮಾರ್ ಸರ್ಕಾರ್ *(-ಸಂ)*

> ''ನೀವು ಧಾರ್ಮಿಕರಾಗುತ್ತಿರುವಿರಿ ಎನ್ನುವುದಕ್ಕೆ ಮೊದಲನೆ ಗುರುತೇ ನೀವು ಹೆಚ್ಚು ಉಲ್ಲಾಸಭರಿತರಾಗಿರುವುದು. ಪೆಚ್ಚು ಮುಖವಾಗಿದ್ದರೆ ಅವನಿಗೆ ಏನೋ ಅಗ್ನಿಮಾಂದ್ಯವಿರಬಹುದೇ ಹೊರತು ಎಂದಿಗೂ ಅದು ಧಾರ್ಮಿಕತೆಯ ಕುರುಹಲ್ಲ. ಸಾತ್ವಿ ಕತೆಯ ಸ್ವಭಾವ ಆನಂದದಾಯಕವಾದುದು. ಸಾತ್ವಿಕನಿಗೆ ಎಲ್ಲವೂ ಸಂತೋಷದಾಯಕ. ಈ ಭಾವನೆ ಬಂದರೆ ನೀವು ಯೋಗದಲ್ಲಿ ಮುಂದುವರಿಯುತ್ತಿರುವಿರಿ ಎಂದು ತಿಳಿಯಿರಿ. ತಮಸ್ಸಿನಿಂದಲೇ ಎಲ್ಲಾ ದುಃಖ ಪ್ರಾಪ್ತವಾಗುವುದು. ಆದ ಕಾರಣ ಅದರಿಂದ ಪಾರಾಗಿ, ಅಳುಮೋರೆ ತಾಮಸಿಕತೆಯ ಫಲ. ಆಶಿಷ್ಟರೂ, ದೃಢಿಷ್ಠರೂ, ಯುವಕರೂ, ಸಾಹಸಪ್ರಿಯರೂ ಮಾತ್ರ ಯೋಗಿ ಗಳಾಗಲು ಅರ್ಹರು. ಯೋಗಿಗೆ ಎಲ್ಲವೂ ಆನಂದಮಯ. ಅವನು ನೋಡುವ ಪ್ರತಿಯೊಂದು ಮಾನವನ ಮುಖವೂ ಮಂದಹಾಸವನ್ನು ತರುವುದು. ಗುಣಾಢ್ಯನ ಗುರುತು ಇದು. ದುಃಖ ಪಾಪದಿಂದಾದುದು, ಮತ್ತಾವುದರಿಂದಲೂ ಅಲ್ಲ. ಅಳು ಮೋರೆಯನ್ನು ಕಟ್ಟಿಕೊಂಡು ನೀವೇನು ಮಾಡುತ್ತೀರಿ? ಅದು ಭಯಂಕರವಾದುದು. ಅಳುಮೋರೆ ಇದ್ದರೆ ಅಂದು ಹೊರಗೆ ಹೋಗಬೇಡಿ. ಕೋಣೆಯಲ್ಲೇ ಕುಳಿತುಕೊಳ್ಳಿ. ಈ ರೋಗವನ್ನು ಪ್ರಪಂಚಕ್ಕೆ ಹರಡುವುದಕ್ಕೆ ನಿಮಗೆ ಯಾವ ಅಧಿಕಾರವಿದೆ?''
>
> — ಸ್ವಾಮಿ ವಿವೇಕಾನಂದ *(ಕೃತಿಶ್ರೇಣಿ, ಸಂ.೨,ಪು.೪೩೭)*